**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ 6ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-3.**

ಸಂಖ್ಯೆ:ಎ8/ಎಸ್.ಎಸ್.ಎಲ್.ಸಿ.ಅಧಿಸೂಚನೆ/ಏಪ್ರಿಲ್-2020/24/2019-20 ದಿನಾಂಕ: 17.10.2019

**:: ಸುತ್ತೋಲೆ ::**

ವಿಷಯ:- 2020ರ ಮಾರ್ಚ್/ಏಪ್ರಿಲ್ ಎಸ್.ಎಸ್.ಎಲ್.ಸಿ ಪರೀಕ್ಷೆಗೆ ಸಂಬಂಧಿಸಿದಂತೆ ವಿಭಿನ್ನ ಸಾಮರ್ಥ್ಯವುಳ್ಳ ವಿದ್ಯಾರ್ಥಿಗಳಿಗೆ ನೀಡುವ ಸೌಲಭ್ಯಗಳು ಮತ್ತು ವಿನಾಯಿತಿ ಬಗ್ಗೆ.

ಉಲ್ಲೇಖ:- ಮಂಡಳಿ ಅಧಿಸೂಚನೆ ಸಂಖ್ಯೆ ಎ8/ಎಸ್.ಎಸ್.ಎಲ್.ಸಿ.ಅಧಿಸೂಚನೆ/ಏಪ್ರಿಲ್-2020/24/2019-20 ದಿನಾಂಕ:30.08.2019.

* * * * *

Kiran Raghupathi

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಿಭಿನ್ನ ಸಾಮರ್ಥ್ಯವುಳ್ಳ (Differently Abled) ವಿದ್ಯಾರ್ಥಿಗಳಿಗೆ ವಿಶೇಷ ಸೌಲಭ್ಯಗಳನ್ನು ಮತ್ತು ವಿನಾಯಿತಿಗಳನ್ನು ನೀಡುವ ಬಗ್ಗೆ ಉಲ್ಲೇಖಿತ ದಿನಾಂಕ:30.08.2019ರ ಮಂಡಳಿಯ ಅಧಿಸೂಚನೆಯ ಕ್ರಮ ಸಂಖ್ಯೆ:IX ರ ಪುಟ ಸಂಖ್ಯೆ:18,19 ಮತ್ತು 20ರಲ್ಲಿ ವಿವರಿಸಲಾಗಿದೆ. ಅದರಂತೆ ಸದರಿ ಸೌಲಭ್ಯಗಳನ್ನು ಮತ್ತು ವಿನಾಯಿತಿಗಳನ್ನು ಪಡೆದುಕೊಳ್ಳಲು ಸಂಬಂಧಿಸಿದ ವಿದ್ಯಾರ್ಥಿಗಳ ವೈದ್ಯಕೀಯ ದಾಖಲೆಗಳೊಂದಿಗೆ ಪ್ರಸ್ತಾವನೆಯನ್ನು ಸಂಬಂಧಿಸಿದ ಶಾಲಾ ಮುಖ್ಯೋಪಾಧ್ಯಾಯರು ಜಿಲ್ಲಾ ಉಪನಿರ್ದೇಶಕರಿಗೆ ಸಲ್ಲಿಸಿ ಅನುಮತಿಯನ್ನು ಪಡೆದುಕೊಳ್ಳಬೇಕಾಗಿರುತ್ತದೆ.

ಈ ರೀತಿ ಜಿಲ್ಲಾ ಉಪನಿರ್ದೇಶಕರಿಂದ ಪಡೆದ ಅನುಮತಿ ಪತ್ರವನ್ನು ಮತ್ತು ವೈದ್ಯಕೀಯ ಪ್ರಮಾಣ ಪತ್ರಗಳ ದಾಖಲೆಗಳನ್ನು ಸಂಬಂಧಿಸಿದ ಶಾಲಾ ಮುಖ್ಯೋಪಾಧ್ಯಾಯರು ಶಾಲೆಯಲ್ಲಿ ಸಂರಕ್ಷಿಸಿಡುವುದು. ಹಾಗೂ ಸದರಿ ದಾಖಲೆಗಳನ್ನು ವಿದ್ಯಾರ್ಥಿಯ ಪ್ರವೇಶ ಪತ್ರದೊಂದಿಗೆ ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರಿಗೆ ನೀಡಿ ನಿಯಮಾನುಸಾರ ಸೌಲಭ್ಯ/ವಿನಾಯಿತಿ ಪಡೆಯುವುದು ಶಾಲಾ ಮುಖ್ಯ ಶಿಕ್ಷಕರ ಜವಾಬ್ದಾರಿಯಾಗಿರುತ್ತದೆ. ಈ ಬಗ್ಗೆ ಯಾವುದೇ ತೊಂದರೆಗಳು ಉಂಟಾದಲ್ಲಿ ಸಂಬಂಧಿಸಿದ ಶಾಲಾ ಮುಖ್ಯೋಪಾಧ್ಯಾಯರನ್ನೆ ಜವಾಬ್ದಾರರನ್ನಾಗಿ ಮಾಡಲಾಗುವುದು. ಸದರಿ ಪ್ರಮಾಣ ಪತ್ರಗಳು/ದಾಖಲೆಗಳನ್ನು ಮಂಡಳಿಯ ಜಾಲತಾಣದ ಶಾಲಾ ಲಾಗಿನ್‌ನಲ್ಲಿ ಅಪ್‌ಲೋಡ್ ಮಾಡುವ ಅವಶ್ಯಕತೆ ಇರುವುದಿಲ್ಲ.

ಮುಂದುವರೆದು, ಕೆಲವು ವಿದ್ಯಾರ್ಥಿಗಳು ಮೇಲ್ಕಂಡ ಸೌಲಭ್ಯ/ವಿನಾಯಿತಿಗಳನ್ನು ಪಡೆಯಲು ಕೇಂದ್ರ ಸರ್ಕಾರದಿಂದ ಮಂಜೂರಾಗಿರುವ UDID (Unique Disebility ID) ನ್ನು (Online ಮುಖಾಂತರ ಪಡೆದಿರುವ ಕಾರ್ಡ್‌ಗಳ ಮುದ್ರಿತ ಪ್ರತಿ) ಉಪನಿರ್ದೇಶಕರ ಕಛೇರಿಗೆ ಸಲ್ಲಿಸುತ್ತಿದ್ದು, ಕೆಲವು ಉಪನಿರ್ದೇಶಕರ ಕಛೇರಿಗಳಲ್ಲಿ UDID ಗಳನ್ನು ಸ್ವೀಕರಿಸದೆ ಹಿಂದಿರುಗಿಸಲಾಗುತ್ತಿದೆ ಎಂಬ ದೂರುಗಳು ಈ ಕಛೇರಿಯಲ್ಲಿ ಸ್ವೀಕೃತವಾಗಿರುತ್ತವೆ. ಆದ್ದರಿಂದ ಈ ರೀತಿಯ UDID ಗಳನ್ನು ಸ್ವೀಕರಿಸಿ ವಿದ್ಯಾರ್ಥಿಗಳಿಗೆ ಸೌಲಭ್ಯ/ವಿನಾಯಿತಿಗಳನ್ನು ನೀಡುವ ಬಗ್ಗೆ ನಿಯಮಾನುಸಾರ ಪರಿಶೀಲಿಸಿ ಅನುಮತಿ ನೀಡಲು ತಿಳಿಸಿದೆ.

(ವಿ.ಸುಮಂಗಲ) 17/10/19

ನಿರ್ದೇಶಕರು, ಪರೀಕ್ಷೆಗಳು

ಗೆ,

1. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆರವರಿಗೆ ಸೂಕ್ತ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆರವರಿಗೆ ಸೂಕ್ತ ಕ್ರಮಕ್ಕಾಗಿ.
3. ರಾಜ್ಯದ ಎಲ್ಲಾ ಸರ್ಕಾರಿ/ಮಾನ್ಯತೆ ಪಡೆದ ಅನುದಾನಿತ ಮತ್ತು ಅನುದಾನರಹಿತ ಪ್ರೌಢ ಶಾಲಾ ಮುಖ್ಯೋಪಾಧ್ಯಾಯರಿಗೆ (ಸಂಬಂಧಿಸಿದ ಉಪನಿರ್ದೇಶಕರ ಮುಖಾಂತರ) ಸೂಕ್ತ ಕ್ರಮಕ್ಕಾಗಿ.
4. ಕಛೇರಿ ಪ್ರತಿ.

ನಿರ್ದೇಶಕರ ಕಚೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಪದವಿ ಪೂರ್ವ ಶಿಕ್ಷಣ ಭವನ, ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 012.

ಸಂಖ್ಯೆ: ಪಿಯುಇ/ಶೈ.ಶಾ–04/ಹೆ.ಸೌ.ನೀ.ಕು–01/2014–15 ದಿನಾಂಕ: 10–02–2015

## ಸುತ್ತೋಲೆ

ವಿಷಯ: ವಿಕಲಚೇತನ ಮಕ್ಕಳಿಗೆ ಪರೀಕ್ಷಾ ಸಮಯದಲ್ಲಿ ಹೆಚ್ಚಿನ ಅನುಕೂಲತೆಗಳನ್ನು ಒದಗಿಸಿಕೊಡುವ ಕುರಿತು ಹಾಗೂ ಪ್ರಥಮ ಮತ್ತು ದ್ವಿತೀಯ ಪಿಯುಸಿಯಲ್ಲಿ ಒಂದು ಭಾಷೆಯನ್ನು ವ್ಯಾಸಂಗ ಮಾಡುವುದರಿಂದ ವಿನಾಯಿತಿ ನೀಡುವ ಕುರಿತು.

ಉಲ್ಲೇಖ: 1. ಸರ್ಕಾರ ಆದೇಶ ಸಂಖ್ಯೆ ಸಕಕಾ 141 ಪಿಹೆಚ್‌ಪಿ 92 ದಿ. 30–06–1992.
2. ಸರ್ಕಾರದ ಆದೇಶ ಸಂಖ್ಯೆ ಮಮಇ 65 ಪಿಹೆಚ್‌ಪಿ 2006 ದಿ.10–03–2000.
3. ಸರ್ಕಾರದ ಸುತ್ತೋಲೆ ಸಂಖ್ಯೆ 370 ಯೋಯೋಕ 2009 ದಿ. 17–02–2010.
4. ಸರ್ಕಾರದ ಪತ್ರ ಸಂಖ್ಯೆ ಇಡಿ 173 ಟಿಪಿಯು 2013 ದಿ. 18–03–2014.
5. ಸರ್ಕಾರದ ಪತ್ರ ಸಂಖ್ಯೆ ಇಡಿ 322 ಡಿಜಿಡಿ 2014 ದಿನಾಂಕ 07–11–2014.

*****

Kiran Raghupathi

ಉಲ್ಲೇಖ (1) ಮತ್ತು (2)ರ ಸರ್ಕಾರಿ ಆದೇಶದಲ್ಲಿ ಸರ್ಕಾರಿ, ಖಾಸಗಿ ಅನುದಾನಿತ ಮತ್ತು ಅನುದಾನ ರಹಿತ ಕಾಲೇಜುಗಳಲ್ಲಿ ಓದುತ್ತಿರುವ ಕಿವುಡು ಮತ್ತು ಕಲಿಕಾ ನ್ಯೂನತೆ ಹಾಗೂ ಬುದ್ಧಿಮಾಂದ್ಯ ಮಕ್ಕಳು ಒಂದು ಭಾಷೆಯನ್ನು ವ್ಯಾಸಂಗ ಮಾಡುವುದರಿಂದ ವಿನಾಯಿತಿ ನೀಡಲು ಆದೇಶಿಸಿರುತ್ತದೆ. ಉಲ್ಲೇಖ (3)ರ ಸರ್ಕಾರದ ಸುತ್ತೋಲೆಯಲ್ಲಿ ಕಲಿಕೆಯಲ್ಲಿ ನ್ಯೂನತೆಯಿರುವ ಹಾಗೂ ಡಿಸ್‌ಕ್ಲೇಷಿಯಾ ಇರುವ ಮಕ್ಕಳಿಗೆ 11ನೇ ಮತ್ತು 12ನೇ ತರಗತಿಗಳಲ್ಲಿ ಭಾಷಾ ವಿಷಯಗಳಲ್ಲಿ ಒಂದು ವಿಷಯದಲ್ಲಿ ವಿನಾಯ್ತಿ, 3 ಘಂಟೆ ಅವಧಿಯಲ್ಲಿ ಉತ್ತರಿಸಬೇಕಾದ ವಿಷಯಗಳಿಗೆ ಒಂದು ಘಂಟೆ ಹೆಚ್ಚಿನ ಕಾಲಾವಕಾಶ ಹಾಗೂ ಪರೀಕ್ಷಾ ಮೌಲ್ಯಮಾಪನದಲ್ಲಿ ಸಣ್ಣಮಟ್ಟ ದೋಷಗಳನ್ನು ಪರಿಗಣಿಸದಿರುವುದು ಎಂದು ಸೂಚಿಸಿರುತ್ತದೆ. ಉಲ್ಲೇಖ (4)ರ ಸರ್ಕಾರದ ಪತ್ರದಲ್ಲಿ ಮಿನಿಸ್ಟ್ರಿ ಆಫ್ ಸೋಸಿಯಲ್ ಜಸ್ಟೀಸ್ ಅಂಡ್ ಎಂಪವರ್‌ಮೆಂಟ್ ಡಿಪಾರ್ಟ್‌ಮೆಂಟ್ ಆಫ್ ಡಿಸ್‌ಎಬಿಲಿಟಿ ಅಫೇರ್ಸ್, ನವದೆಹಲಿ ಇವರು ಪತ್ರ ಎಫ್.ಸಂಖ್ಯೆ 16–110/2003–ಡಿಡಿ.III ದಿನಾಂಕ 26–02–2013ರಂತೆ ಸರ್ಕಾರದ ಕಾರ್ಯದರ್ಶಿಯವರಿಗೆ ನೀಡಿರುವ ಮಾರ್ಗಸೂಚಿಯಲ್ಲಿ ರಾಷ್ಟ್ರಾದ್ಯಂತ ಕಲಿಕಾ ನ್ಯೂನತೆ ಇರುವ ಎಲ್ಲ ವಿದ್ಯಾರ್ಥಿಗಳಿಗೆ ಒಂದೇ ರೀತಿಯ ಮಾರ್ಗಸೂಚಿಯನ್ನು ಅನುಸರಿಸಲು ತಿಳಿಸಿರುತ್ತದೆ. (ಪ್ರತಿಯನ್ನು ಇದರೊಂದಿಗೆ ಲಗತ್ತಿಸಿದೆ) ಉಲ್ಲೇಖ(5)ರ ಸರ್ಕಾರದ ಪತ್ರದಲ್ಲಿ ಸರ್ಕಾರವು ಈ ಬಗ್ಗೆ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಿರುತ್ತದೆ. ಅದರಂತೆ, ಪದವಿ ಪೂರ್ವ ಶಿಕ್ಷಣ ಹಂತದಲ್ಲಿ ವ್ಯಾಸಂಗ ಮಾಡುವ ವಿಕಲಚೇತನ ವಿದ್ಯಾರ್ಥಿ/ನಿಯರಿಗೆ ಪರೀಕ್ಷಾ ಸಮಯದಲ್ಲಿ ಹೆಚ್ಚಿನ ಅನುಕೂಲತೆಗಳನ್ನು ಒದಗಿಸುವ ಕುರಿತು ಹಾಗೂ ಕಲಿಕಾ ನ್ಯೂನತೆ ಮತ್ತು ವಿಕಲತೆ ಹೊಂದಿರುವ ವಿದ್ಯಾರ್ಥಿ/ನಿಯರಿಗೆ ಈ ಕೆಳಕಂಡ ವಿಶೇಷ ಸೌಲಭ್ಯಗಳನ್ನು ಒದಗಿಸಲು ಈ ಕೆಳಕಂಡ ಮಾರ್ಗಸೂಚಿಯನ್ನು ಅನುಸರಿಸಲು ಸೂಚಿಸಿದೆ:

1) ಶ್ರವಣದೋಷ, ಮೂಕತನ, ಕಲಿಕೆಯಲ್ಲಿ ನ್ಯೂನತೆ ಹಾಗೂ ಡಿಸ್‌ಕ್ಲೇಷಿಯಾ ಹೊಂದಿರುವ ವಿದ್ಯಾರ್ಥಿ/ನಿಯರು ಭಾಗ–1ರಲ್ಲಿ ಒಂದು ಭಾಷಾ ವಿಷಯ ಕಲಿಕೆ ವಿನಾಯ್ತಿಗಾಗಿ ಕೆಳಕಂಡ ಸಂಸ್ಥೆಗಳು ನೀಡುವ ಪ್ರಮಾಣಪತ್ರವನ್ನು ಪಡೆದು, ಎಸ್‌ಎಸ್‌ಎಲ್‌ಸಿ/ತತ್ಸಮಾನ ಪರೀಕ್ಷೆಯ ಫೋಟೋಪ್ರತಿ ಹಾಗೂ ಭಾಷಾ ವಿಷಯಗಳಿಗೆ ವಿನಾಯ್ತಿ ಪಡೆದ ಬಗ್ಗೆ ಪಡೆದ ಆದೇಶದ ಪ್ರತಿಯನ್ನು ಲಗತ್ತಿಸಿ, ಪಿಯುಸಿ ಹಂತದಲ್ಲಿ ಯಾವ ಭಾಷೆಯನ್ನು ವ್ಯಾಸಂಗ ಮಾಡುವುದರಿಂದ ವಿನಾಯಿತಿ ಬೇಡುತ್ತಿದ್ದಾರೆ ಎಂಬ ಮಾಹಿತಿಯನ್ನು ಸಂಬಂಧಪಟ್ಟ ಕಾಲೇಜಿನ ಪ್ರಾಂಶುಪಾಲರ ಮುಖಾಂತರ ಅರ್ಜಿಯನ್ನು ನಿರ್ದೇಶನಾಲಯಕ್ಕೆ ಅನುಮತಿಗಾಗಿ ಸಲ್ಲಿಸುವುದು.

- ನಿಮ್ಹಾನ್ಸ್ ಆಸ್ಪತ್ರೆ, ಬೆಂಗಳೂರು
- ಅಖಿಲ ಭಾರತ ಧ್ವಕ್–ಶ್ರವಣ ಸಂಸ್ಥೆ, ಮೈಸೂರು

Kiran Raghupathi

- ➢ ಸರ್ಕಾರಿ ಆಸ್ಪತ್ರೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಯಾವುದೇ ಮನಃಶಾಸ್ತ್ರಜ್ಞರು ನೀಡುವ ಪ್ರಮಾಣ ಪತ್ರ.
- ➢ ಕನಿಷ್ಠ ಎಂ.ಫಿಲ್. ವಿದ್ಯಾರ್ಹತೆಯನ್ನು ಹೊಂದಿರುವ ಕ್ಲಿನಿಕಲ್ ಮನಃಶಾಸ್ತ್ರಜ್ಞರು ನೀಡುವ ಪ್ರಮಾಣ ಪತ್ರಕ್ಕೆ ಜಿಲ್ಲಾ ಸರ್ಜನ್ ಶ್ರೇಣಿಗಿಂತಲೂ ಕಡಿಮೆ ಇರದ ಸರ್ಕಾರಿ ವೈದ್ಯರು ದೃಢೀಕರಿಸಿದ ಪ್ರಮಾಣ ಪತ್ರ
- ➢ ಮಲ್ಲೇಶ್ವರಂ ಅಸೋಸಿಯೇಷನ್(ರಿ), ಎ-3, ಸೂರ್ಯ ನೆಸ್ಟ್ ನಂ.57, 15ನೇ ಕ್ರಾಸ್ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-55ರವರು ನೀಡುವ ಪ್ರಮಾಣ ಪತ್ರ.

2) ಕಲಿಕಾ ನ್ಯೂನತೆ ಹೊಂದಿರುವ ವಿದ್ಯಾರ್ಥಿಗಳು ಅವರ ಕಲಿಕಾ ನ್ಯೂನತೆಗೆ ಸಂಬಂಧಿಸಿದಂತೆ ಅವರ ಬೇಡಿಕೆಗೆ ತಕ್ಕಂತೆ ವೈಜ್ಞಾನಿಕ ಉಪಕರಣಗಳನ್ನು ಬಳಸಲು ಮುಖ್ಯ ಅಧೀಕ್ಷಕರು ಅನುಮತಿ ನೀಡುವುದು.

3) ಕಾಲೇಜಿನಲ್ಲಿ ವ್ಯಾಸಂಗ ಮಾಡುವ ರೆಗ್ಯುಲರ್ ವಿದ್ಯಾರ್ಥಿಗಳು ಹಾಗೂ ಪರೀಕ್ಷೆಗೆ ಖಾಸಗಿಯಾಗಿ ನೋಂದಾಯಿಸುವ ವಿದ್ಯಾರ್ಥಿಗಳಿಗೆ ಏಕರೂಪದ ಸೌಲಭ್ಯ ನೀಡುವುದು.

4) ಶೇಕಡಾ 40ರಷ್ಟು ವಿಕಲತೆ ಹೊಂದಿರುವ ವಿದ್ಯಾರ್ಥಿಗಳಿಗೆ ಬರಹಗಾರರು/ಓದುಗಾರರು/ ಪ್ರಯೋಗಾಲಯ ಸಹಾಯಕರನ್ನು ಬೇಡಿಕೆಯ ಮೇರೆಗೆ ಒದಗಿಸುವುದು.

5) ವಿಕಲತೆ ಹೊಂದಿರುವ ವಿದ್ಯಾರ್ಥಿಯ ಕೋರಿಕೆಯ ಮೇರೆಗೆ ಬರಹಗಾರರು/ಓದುಗಾರರು/ ಪ್ರಯೋಗಾಲಯ ಸಹಾಯಕರನ್ನು ಪರೀಕ್ಷಾ ಮುಖ್ಯ ಅಧೀಕ್ಷಕರು ನೀಡಬಹುದು. ಪರೀಕ್ಷಾ ಅಧೀಕ್ಷಕರು ವಿಕಲತೆ ಹೊಂದಿರುವ ವಿದ್ಯಾರ್ಥಿಗಳ ಸಹಾಯಕ್ಕಾಗಿ ಬರಹಗಾರರು/ಓದುಗಾರರು/ಪ್ರಯೋಗಾಲಯ ಸಹಾಯಕರನ್ನು ಒದಗಿಸಲು ಕ್ರಮವಹಿಸುವುದು. ಅಂತಹ ಬರಹಗಾರರು/ಓದುಗಾರರು/ಪ್ರಯೋಗಾಲಯ ಸಹಾಯಕರನ್ನು ವಿಕಲತೆ ಹೊಂದಿರುವ ವಿದ್ಯಾರ್ಥಿಗೆ ಪರೀಕ್ಷೆ ಪ್ರಾರಂಭವಾಗುವ ಒಂದು ದಿನದ ಮುಂಚಿನವಾಗಿ ಸಂಪರ್ಕಿಸಲು ಅನುವು ಮಾಡಿಕೊಡುವುದು.

6) ಬರಹಗಾರರು/ಓದುಗಾರರು/ಪ್ರಯೋಗಾಲಯ ಸಹಾಯಕರ ವಿದ್ಯಾರ್ಹತೆ, ಪಡೆದಿರುವ ಅಂಕಗಳು, ವಯೋಮಿತಿ ಇತ್ಯಾದಿ ನಿಬಂಧನೆಗಳನ್ನು ವಿಧಿಸುವುದನ್ನು ನಿಯಂತ್ರಿಸುವುದನ್ನು ಬಿಟ್ಟು ಉಳಿದಂತೆ ಪರೀಕ್ಷಾ ದುರಾಚರಣೆ ನಡೆಯದಂತೆ ಕ್ರಮವಹಿಸಲು ಅಧಿಕ ವೀಕ್ಷಕರನ್ನು ನೇಮಿಸುವುದು.

7) ಈ ರೀತಿ ನೇಮಿಸಲ್ಪಟ್ಟ ಬರಹಗಾರರು/ಓದುಗಾರರು/ಪ್ರಯೋಗಾಲಯ ಸಹಾಯಕರನ್ನು ಬದಲಾಯಿಸಿ ಒಂದು ಅಥವಾ ಹೆಚ್ಚಿನ ಬರಹಗಾರರು/ಓದುಗಾರರನ್ನು ವಿವಿಧ ವಿಷಯಗಳಲ್ಲಿ ನೇಮಿಸಲು ನೆರವು ನೀಡುವುದು.

8) ವಿಕಲತೆ ಹೊಂದಿರುವ ವಿದ್ಯಾರ್ಥಿಯು ತಾನು ಬಯಸಿದಂತೆ ಉತ್ತರವನ್ನು ಗಣಕಯಂತ್ರದಲ್ಲಿ ಟೈಪ್ ಮಾಡಲು ಅಥವಾ ಉತ್ತರಗಳನ್ನು ರೆಕಾರ್ಡ್ ಮಾಡಲು ತಂತ್ರಜ್ಞಾನ ಬಳಕೆಗೆ ಅನುಕೂಲ ಮಾಡಿಕೊಡುವುದು.

9) ಈ ರೀತಿ ಗಣಕಯಂತ್ರ ಬಳಕೆಯಿಂದ ಪರೀಕ್ಷೆ ಬರೆಯುವ ವಿದ್ಯಾರ್ಥಿಗೆ ಗಣಕಯಂತ್ರವನ್ನು ಒಂದು ದಿನದ ಮುಂಚಿತವಾಗಿ ಗಣಕಯಂತ್ರವನ್ನು ಪರೀಕ್ಷಿಸಲು ಹಾಗೂ ಅದರಲ್ಲಿರುವ ಸಾಫ್ಟ್‌ವೇರ್/ಸಿಸ್ಟಂ ನೋಡಲು ಅನುವು ಮಾಡಿ ಕೊಡುವುದು.

10) ಅಂಗವಿಕಲತೆಯ ಕುರಿತು ವಿದ್ಯಾರ್ಥಿಯು ಪರೀಕ್ಷಾ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿಯೇ ಸದರಿ ವಿದ್ಯಾರ್ಥಿಗೆ ನೀಡಬೇಕಾದ ವಿಶೇಷ ಸೌಲಭ್ಯಗಳ ಮಾಹಿತಿಯನ್ನು ತುಂಬಲು ಹಾಗೂ ಅದರಂತೆ ವಿದ್ಯಾರ್ಥಿಯು ಬಯಸಿದಂತೆ ವಿಶೇಷ ಸೌಲಭ್ಯಗಳನ್ನು ನೀಡಲು ಹಾಗೂ ಪರೀಕ್ಷಾ ಸ್ಥಳವನ್ನು ನಿಗದಿಪಡಿಸಲು ಅನುವು ಮಾಡುವುದು.

11) ವೈದ್ಯಕೀಯ ಸಕ್ಷಮ ಪ್ರಾಧಿಕಾರವು ನೀಡಿದ ವಿಕಲತೆ ಪ್ರಮಾಣ ಪತ್ರವನ್ನು ಅಂಗೀಕರಿಸುವುದು.

12) ವಿಕಲತೆ ಹೊಂದಿರುವ ವಿದ್ಯಾರ್ಥಿಗಳಿಗೆ ಈಗಿರುವಂತೆ "ಅಧಿಕ ಸಮಯ ಅಥವಾ ಹೆಚ್ಚುವರಿ ಸಮಯ" ಎಂದು ಕರೆಯುವ ಬದಲು "ಅನುಕಂಪದ ಸಮಯ" ಎಂದು ಹಾಗೂ ಒಂದು ಘಂಟೆಯ ಪರೀಕ್ಷಾ ಸಮಯಕ್ಕೆ 20 ನಿಮಿಷಗಳನ್ನು ಬರಹಗಾರರು/ಓದುಗಾರರು/ ಪ್ರಯೋಗಾಲಯ ಸಹಾಯಕರನ್ನು ನೇಮಿಸುವ ಸಂದರ್ಭಗಳಲ್ಲಿ ಒದಗಿಸುವುದು. ಅಂದರೆ ಮೂರು ಘಂಟೆಗಳ ಪರೀಕ್ಷೆಗೆ ಒಂದು ಘಂಟೆ ಅವಧಿಯ ಸಮಯಾವಕಾಶವನ್ನು ಹೆಚ್ಚಿಗೆ ನೀಡುವುದು.

13) ವಿಕಲತೆ ಹೊಂದಿರುವ ವಿದ್ಯಾರ್ಥಿಗಳು ಸರಳ ಕ್ಯಾಲ್‌ಕ್ಯೂಲೇಟರ್ ಮತ್ತು ರೇಖಾಗಣಿತ ಪೆಟ್ಟಿಗೆಯನ್ನು ಬಳಸಲು ಅನುಮತಿ ನೀಡುವುದು.

14) ಪರೀಕ್ಷೆ ಪ್ರಾರಂಭವಾಗುವುದಕ್ಕಿಂತ ಮುಂಚಿತವಾಗಿ ವಿಕಲತೆ ಹೊಂದಿರುವ ವಿದ್ಯಾರ್ಥಿಗಳು ಕೆಳಮಹಡಿಯಲ್ಲಿ ಪರೀಕ್ಷೆಯನ್ನು ಬರೆಯುವಂತೆ ಅಗತ್ಯ ಕ್ರಮ ಕೈಗೊಳ್ಳುವುದು.

ಪದವಿ ಪೂರ್ವ ಶಿಕ್ಷಣ ಹಂತದಲ್ಲಿ ಕಲಿಕಾ ನ್ಯೂನತೆ ಹಾಗೂ ವಿಕಲತೆ ಹೊಂದಿರುವ ವಿದ್ಯಾರ್ಥಿಗಳಿಗೆ ಮೇಲ್ಕಂಡಂತೆ ವಿಶೇಷ ಸೌಲಭ್ಯಗಳನ್ನು ಒದಗಿಸಲು ಮೇಲೆ ಸೂಚಿಸಿದಂತೆ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ.

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ.

ಪ್ರತಿಗಳನ್ನು ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ:

1. ರಾಜ್ಯದ ಪದವಿ ಪೂರ್ವ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲಾ ಉಪನಿರ್ದೇಶಕರಿಗೆ.
2. ಪದವಿ ಪೂರ್ವ ಶಿಕ್ಷಣವನ್ನು ಬೋಧಿಸುವ ಎಲ್ಲಾ ಕಾಲೇಜುಗಳ ಪ್ರಾಂಶುಪಾಲರಿಗೆ.
3. ಜಂಟಿ ನಿರ್ದೇಶಕರು/ಉಪನಿರ್ದೇಶಕರು/ಸಹಾಯಕನಿರ್ದೇಶಕರು, ಆಡಳಿತ/ಶೈಕ್ಷಣಿಕ/ಪರೀಕ್ಷೆ. ಪದವಿ ಪೂರ್ವ ಶಿಕ್ಷಣ ಇಲಾಖೆ,
4. ಇ-ಅಡಳಿತ ಶಾಖೆ ಪದವಿ ಪೂರ್ವ ಶಿಕ್ಷಣ ಇಲಾಖೆ, ವೆಬ್‌ಸೈಟ್‌ನಲ್ಲಿ ಅಳವಡಿಸಲು.

ಪ್ರತಿಗಳನ್ನು ಮಾಹಿತಿಗಾಗಿ:

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು(ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ) ಶಿಕ್ಷಣ ಇಲಾಖೆ. ಬೆಂಗಳೂರು 560001.
2. ಆಪ್ತ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು, ವಿಧಾನಸೌಧ, ಬೆಂಗಳೂರು.
3. ಆಧೀನ ಕಾರ್ಯದರ್ಶಿಗಳು, ರಾಜ್ಯ ಅಂಗವಿಕಲ ವ್ಯಕ್ತಿಗಳ ಆಯುಕ್ತರ ಕಛೇರಿ-ಕರ್ನಾಟಕ, ನಂ 55,2ನೇ ಮಹಡಿ, "ಅಭಯ ಸಂಕೀರ್ಣ" ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯ ಕಟ್ಟಡ, ರಿಸಲ್ದಾರ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು 560020.
4. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಬೆಂಗಳೂರು.
5. ನಿರ್ದೇಶಕರ ಆಪ್ತಶಾಖೆಗೆ – ಮಾಹಿತಿಗಾಗಿ.
6. ಕಛೇರಿ ಪ್ರತಿ.

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕಲಿಕೆಯಲ್ಲಿ ನ್ಯೂನತೆ ಇರುವ ಅಂಗವಿಕಲ ಮಕ್ಕಳಿಗೆ ಒಂದೇ ಭಾಷೆಯನ್ನು ಮಾತ್ರ ಅಧ್ಯಯನ ಮಾಡುವ ಬಗ್ಗೆ.

ಓದಲಾಗಿದೆ : 1) ಸರ್ಕಾರದ ಆದೇಶ ಸಂ: ಸಕಕಾ 79 ಪಿಹೆಚ್‌ಪಿ 78 ದಿ: 16:18–1–78
2) ಸರ್ಕಾರದ ಆದೇಶ ಸಂ: ಸಕಕಾ 141 ಪಿಹೆಚ್‌ಪಿ 92 ದಿ: 30–06–92
3) ಅಂಗವಿಕಲರ ಕಲ್ಯಾಣ ಇಲಾಖೆಯ ನಿರ್ದೇಶಕರ ಪತ್ರದ ಸಂ: ನಿಅಕಿ:ಭಾವಿ:93–04/2000 ದಿನಾಂಕ: 17–12–99.

ಪ್ರಸ್ತಾವನೆ:–

Kiran Raghupathi

ಮೇಲೆ ಓದಲಾದ (1) ಮತ್ತು (2) ರ ಸರ್ಕಾರದ ಆದೇಶಗಳಲ್ಲಿ, ಮಾನ್ಯತೆ ಪಡೆದ ಶಾಲೆಗಳಲ್ಲಿ ಓದುತ್ತಿರುವ ಕಿವುಡ ಮತ್ತು ಕಲಿಕೆಯಲ್ಲಿ ತೊಂದರೆಯಿರುವ ಮಕ್ಕಳು ಅಂದರೆ, ಲರ್ನಿಂಗ್ ಡಿಸೆಬಿಲಿಟಿ ಇರುವವರಿಗೆ ಅಲ್ಲದೆ, ಬುದ್ಧಿಮಾಂದ್ಯ ಮಕ್ಕಳಿಗೂ ಸಹ ಎಲ್ಲಾ ಹಂತಗಳಲ್ಲಿ ಒಂದೇ ಒಂದು ಭಾಷೆಯನ್ನು ಕಲಿಯಲು ಹಾಗೂ ದ್ವಿತೀಯ ಮತ್ತು ತೃತೀಯ ಭಾಷೆಗಳ ಅಭ್ಯಾಸದಿಂದ ವಿನಾಯಿತಿ ನೀಡಲಾಗಿದೆ.

ಆದರೆ, ಕೆಲವು ಶಾಲೆಗಳಲ್ಲಿ ಆಂಗ್ಲ ಮಾಧ್ಯಮದಲ್ಲಿ ವ್ಯಾಸಂಗ ಮಾಡುತ್ತಿರುವ ಇಂತಹ ಮಕ್ಕಳು ಮೊದಲನೆ ಭಾಷೆ ಸಹ ಕಲಿಯಬೇಕಾಗಿದ್ದು, ಎರಡೂ ಭಾಷೆಗಳನ್ನು ಕಲಿಯಲು ಸಾಧ್ಯವಾಗದೇ ತೊಂದರೆಯಾಗುತ್ತಿರುವುದಿರಂದ ದ್ವಿತೀಯ, ತೃತೀಯ ಭಾಷೆ ಎಂದು ನಿರ್ಬಂಧಪಡಿಸದೇ ಶಿಕ್ಷಣ ಮಾಧ್ಯಮ ಭಾಷೆಯನ್ನು ಮಾತ್ರ ಕಲಿಯಲು ಅವಕಾಶ ನೀಡುವಂತೆ ನಿರ್ದೇಶಕರು, ಮೇಲೆ ಓದಲಾದ (3) ರ ಪತ್ರದಲ್ಲಿ ಕೋರಿರುತ್ತಾರೆ.

ಈ ಬಗ್ಗೆ ವಿಷಯವನ್ನು ಕೂಲಂಕುಷವಾಗಿ ಪರಿಶೀಲಿಸಿ, ಮೇಲೆ ಸೂಚಿಸಿರುವ ವರ್ಗದ ವಿದ್ಯಾರ್ಥಿಗಳಿಗೆ ವ್ಯಾಸಂಗದಲ್ಲಿ ಹೆಚ್ಚಿನ ಹೊರೆಯಾಗದಿರುವುದು ಅಗತ್ಯವಿದೆ. ಆದ್ದರಿಂದ, ಈ ಆದೇಶ.

ಸರ್ಕಾರದ ಆದೇಶ ಸಂ: ಮಮ 65 ಪಿಹೆಚ್‌ಪಿ 2000, ಬೆಂಗಳೂರು, ದಿನಾಂಕ: 10–03–2000 ಸರ್ಕಾರದ ಆದೇಶ ಸಂ: ಸಕಕಾ 141 ಪಿಹೆಚ್‌ಪಿ 92 ದಿನಾಂಕ:: 30–06–92 ರ ಆದೇಶವನ್ನು ಮಾರ್ಪಡಿಸಿ, ಮಾನ್ಯತೆ ಪಡೆದ ಶಾಲೆಯಲ್ಲಿ ಓದುತ್ತಿರುವ ಕಿವುಡ ಮತ್ತು ಕಲಿಕಾ ನ್ಯೂನತೆ ಹಾಗೂ ಬುದ್ಧಿಮಾಂದ್ಯ ಮಕ್ಕಳು ಶಿಕ್ಷಣ ಮಾಧ್ಯಮ ಭಾಷೆಯೊಂದನ್ನು ಮಾತ್ರ ಕಲಿಯಲು ಆದೇಶ ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ
ಸಹಿ/–

ಸರ್ಕಾರದ ಅಧೀನ ಕಾರ್ಯದರ್ಶಿ,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.